KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in
Pavate Nagar,Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2014

website: kud.ac.in

No. KU/Aca(S&T)/SSL-Gen/2023-24/1245 Date: 27 OCT 2023

**One day Workshop on Employability Skill**

**ವಿಷಯ:** ದಿನಾಂಕ 09.11.2023 ರಂದು ಜರುಗುವ ತರಬೇತಿ ಕಾರ್ಯಾಗಾರಕ್ಕೆ ಹಾಜರಾಗುವ ಕುರಿತು.

**ಉಲ್ಲೇಖ:** 1. KSHEC/VCP/SEC/2023/658, dt. 22.09.2023.
2. ಪ್ರೊ. ಎಂ.ಜಯಪ್ಪ, ವಿಶೇಷಾಧಿಕಾರಿಗಳು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರ ಮಿಂಚಂಚೆ ದಿನಾಂಕ: 25.10.2023.
3. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 25-10-2023

-----

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಧಾರವಾಡ / ಕಾರವಾರ / ಗದಗ ಹಾಗೂ ಹಾವೇರಿ ಜಿಲ್ಲೆಯನ್ನೊಳಗೊಂಡಂತೆ ಎಲ್ಲ ಸ್ನಾತಕ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ತಿಳಿಸುವುದೇನೆಂದರೆ, ಉಲ್ಲೇಖ 1ರನ್ವಯ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರ ಸುತ್ತೋಲೆಯಂತೆ NEP-2020ರ ಅಡಿಯಲ್ಲಿ ಜಾರಿಯಲ್ಲಿರುವ ಬಿ.ಕಾಂ, ಬಿಬಿಎ ಮತ್ತು ಬಿ.ಎಸ್.ಡಬ್ಲ್ಯೂ ಸ್ನಾತಕ ಪದವಿಗಳ 5ನೇ ಸೆಮಿಸ್ಟರ್‌ಗೆ ಅಳವಡಿಸಿಕೊಂಡಿರುವ Employability Skill ವಿಷಯದ ಬಗ್ಗೆ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ, ಬೆಂಗಳೂರು ಇವರು ಸಂಬಂಧಪಟ್ಟ ಶಿಕ್ಷಕರಿಗೆ ತರಬೇತಿ ನೀಡಲಿದ್ದಾರೆ. ಆದ್ದರಿಂದ, ಬಿ.ಕಾಂ / ಬಿಬಿಎ / ಬಿ.ಎಸ್.ಡಬ್ಲ್ಯೂ ಪದವಿಗಳ ಮುಖ್ಯ ವಿಷಯಗಳನ್ನು ಬೋಧಿಸುತ್ತಿರುವ ಪ್ರತಿ ಮಹಾವಿದ್ಯಾಲಯದಿಂದ ಒಬ್ಬ ಶಿಕ್ಷಕರು ಹಾಗೂ ಎಲ್ಲ ಮಹಾವಿದ್ಯಾಲಯದ ಪ್ರಾಚಾರ್ಯರು ಕಡ್ಡಾಯವಾಗಿ ತರಬೇತಿಗಳಿಗೆ ಭಾಗವಹಿಸಲು ಈ ಮೂಲಕ ತಿಳಿಸಲಾಗಿದೆ. ತರಬೇತಿಯ ವೇಳಾಪಟ್ಟಿ ಮತ್ತು ಸ್ಥಳ ಈ ಕೆಳಗಿನಂತಿದೆ:

| ಕ್ರ.ಸಂ. | ಸ್ಥಳ | ದಿನಾಂಕ | ಸಮಯ |
|---|---|---|---|
| 1 | ಗೋಲ್ಡನ್ ಜೂಬ್ಲಿ ಸಭಾ ಭವನ (Auditorium)<br>ಕರ್ನಾಟಕ ವಿಶ್ವವಿದ್ಯಾಲಯದ ಆವರಣ, ಧಾರವಾಡ | 09.11.2023 | ಬೆಳಿಗ್ಗೆ 10.30 ರಿಂದ<br>ಸಂಜೆ 4.30ರ ವರೆಗೆ |

ಮುಂದುವರೆದು, ಸದರಿ ಕಾರ್ಯಾಗಾರಕ್ಕೆ ಹಾಜರಾಗುವ ಪ್ರತಿನಿಧಿಗಳಿಗೆ ಯಾವುದೇ ರೀತಿಯ ಪ್ರವಾಸ / ದಿನಭತ್ಯೆ ನೀಡಲಾಗುವುದಿಲ್ಲ.

**ವಿಶೇಷ ಸೂಚನೆ:** ಸದರಿ ಕಾರ್ಯಾಗಾರದ ಮೊದಲನೆ ಅವಧಿಯಲ್ಲಿ ಎಲ್ಲ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ NEP-2020ರ ಅಡಿಯಲ್ಲಿ ಜಾರಿಯಲ್ಲಿರುವ 5 ಮತ್ತು 6ನೇ ಸೆಮಿಸ್ಟರ್‌ಗಳ Curriculum Frame Work ಬಗ್ಗೆ ವಿವರವಾದ ಮಾಹಿತಿ ನೀಡಲು ಈ ಹಿಂದಿನ ಪ್ರಾಚಾರ್ಯರ ಸಭೆಯಲ್ಲಿ ನಿರ್ಧರಿಸಿದಂತೆ ಎಲ್ಲ ಮಹಾವಿದ್ಯಾಲಯಗಳ UUCMS ನೊಡಲ್ ಅಧಿಕಾರಿಗಳು ಕೂಡ ಪ್ರಾಚಾರ್ಯರೊಂದಿಗೆ ಕಡ್ಡಾಯವಾಗಿ ಕಾರ್ಯಾಗಾರದಲ್ಲಿ ಭಾಗವಹಿಸಲು ಈ ಮೂಲಕ ತಿಳಿಸಲಾಗಿದೆ.

ಕುಲಸಚಿವರು

**ಗೆ,**

1. ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಧಾರವಾಡ, ಕಾರವಾರ, ಗದಗ ಹಾಗೂ ಹಾವೇರಿ ಜಿಲ್ಲೆಯನ್ನೊಳಗೊಂಡಂತೆ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ (ಮಿಂಚಂಚೆ ಮುಖಾಂತರ)
2. ಪ್ರೊ. ಜಯಪ್ಪಾ, ವಿಶೇಷಾಧಿಕಾರಿಗಳು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.
3. ಎಲ್ಲ ನಿಖಾಯಗಳ ಡೀನರುಗಳು, ಕ.ವಿ.ವಿ. ಧಾರವಾಡ.
4. ಡಾ. ಎಸ್.ಎಂ.ತುವಾರ, NEP ನೊಡಲ್ ಅಧಿಕಾರಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಕ.ವಿ.ವಿ. ಧಾರವಾಡ.
5. ಡಾ. ಕಿರಣಕುಮಾರ ಬನ್ನಿಗೋಳ, ಸಂಯೋಜಕರು, Employability Skill, ಕ.ವಿ.ವಿ. ಧಾರವಾಡ.
6. ಡಾ. ಶಿವಶಂಕರ ಎಸ್., ನೊಡಲ್ ಅಧಿಕಾರಿಗಳು, UUCMS ಘಟಕ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಪ್ರತಿಯನ್ನು ಮಾಹಿತಿಗಾಗಿ:**

1. ವಿತ್ತಾಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2. ಸ್ಥಾನಿಕ ಅಭಿಯಂತರರು, ಕಟ್ಟಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ದಿನಾಂಕ: 09.11.2023 ರಂದು 10.30 ಗಂಟೆಗೆ ಸಭೆ ಜರುಗಿಸಲು ಗೋಲ್ಡನ್ ಜೂಬ್ಲಿ ಸಭಾ ಭವನದಲ್ಲಿ ಸೂಕ್ತ ಏರ್ಪಾಡು ಮಾಡಲು ತಿಳಿಸಲಾಗಿದೆ.
3. ನಿರ್ದೇಶಕರು, ಐ.ಟಿ. ಶಾಖೆ, ಕ.ವಿ.ವಿ. ಧಾರವಾಡ.
4. ಉಪಕುಲಸಚಿವರು, ವಿದ್ಯಾಮಂಡಳ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
5. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು / ಕುಲಸಚಿವರ / ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ., ಧಾರವಾಡ.